ಕವಿತೆ



**ಕೆ.ಎನ್.ಲಾವಣ್ಯ ಪ್ರಭಾ**

ಕಲೆ: ಪೆರ್ಮುದೆ ಮೋಹನ್ ಕುಮಾರ್



# ಮೌನ ಮುರಿಯುವಾಗ

ಎದೆ ಬಡಿತ ಒಮ್ಮೆಗೇ ಹೆಚ್ಚಾಗಿ
ಏರುಪೇರಿನ ಉಸಿರಾಟ
ಕ್ರಮೇಣ... ತಹಬದಿಗೆ ಬರುತ್ತದೆ
ಬಚ್ಚಿಟ್ಟಿದ್ದ ಒಡಲಾಳದ ಸಂಕಟಗಳೆಲ್ಲಾ
ಎದೆಯ ಕವಾಟಗಳನ್ನು ಹಾದು
ಕೊರಳೆಗುರುಳಿ
ಗಂಟಲು ಗದ್ಗದಿತವಾಗುತ್ತದೆ

ಮೌನ ಮುರಿಯುವಾಗ
ಅಸ್ಪಷ್ಟ ಅವಾಂತರದೊಳಗೆ
ಕಣ್ಣು ಮಬ್ಬಾಗಿ ತುಟಿಗಳು ಕಂಪಿಸಿ
ಕೆನ್ನೆಗಿಳಿದ ಕಣ್ಣ ಹನಿ
ಕೃತಾರ್ಥವಾಗುತ್ತದೆ
ನೋವು ನಲಿವು ಬೆಸುಗೆಯಲ್ಲಿ
ಒಲವು ಬದುಕ ಪೊರೆಯುತ್ತದೆ

ಮೌನ ಮುರಿಯುವಾಗ
ಕ್ಷಿತಿಜ ರೇಖೆಯಲ್ಲಿ ಆಕಾಶ ಬಾಗಿ ಇಳೆಯ ತಬ್ಬುತ್ತದೆ
ಹಸಿರೆಲೆಯ ಹೂಬಳ್ಳಿ
ನವಿರಾಗಿ ಬಳುಕಿ
ಕಾಲಾಂತರಗಳಿಂದ ಕಾಯುತ್ತಾ ದೃಢ ನಿಂತ
ಮರದೆದೆಗೆ ಒರಗಿ ಹಬ್ಬುತ್ತದೆ

ಮೌನ ಮುರಿಯುವಾಗ
ಕತ್ತಲೊಳಗೆ ಮಿಂಚು ಗುಡುಗಿನಾರ್ಭಟ ಬಿರುಗಾಳಿ
ಸಹಿತ ಮಳೆ ಧಾರಾಕಾರ
ರಪರಪನೆ ಆಲಿಕಲ್ಲಿನ ಜೊತೆ
ಸುರಿದು ಹರಿದು
ತೊರೆಯಾಗಿ ನದಿಯಾಗಿ
ಕೊಳೆ ಕೆಸರು ತೊಳೆದು
ಹೂನಗೆಯ ಬೆಳಗಿನ ಬೆಡಗಿಗೆ ಸಾಕ್ಷಿಯಾಗುತ್ತದೆ.

ಮೌನ ಮುರಿಯುವಾಗ
ಮುನಿಸ ತೊರೆದ ಮಾತು ಮೈದಳೆದು
ಮೆಲ್ಲ ಮೃದುವಾಗಿ ಕವಿತೆ
ಅರಳಿ ಹೊಳೆಯುತ್ತದೆ
ಬೆಳಗು ಬೈಗು ಬೆಸೆಯುತ್ತದೆ
ಮತ್ತೆ ಇದೀಗ...
ಕಾದು ಕೂತಿದೆ ಮೌನವಾಗಿ
ಮೌನ ಪ್ರೇಮಿಗಳಿಬ್ಬರ ನಡುವೆ
ಚಾಕೊಲೇಟ್‌ಗಾಗಿ
ಕೈಚಾಚಿದ ಮಗುವಿನಂತೆ
ಮೌನ ಮುರಿಯುವ
ಆ ಒಂದು ದಿವ್ಯ ಘಳಿಗೆಗೆ